ಕಥೆ



ಎಸ್. ಶೇಷಾದ್ರಿ ಕಿನಾರ

ಕಲೆ: ಎಸ್.ವಿ. ಹೂಗಾರ್

# ಸುಮ್ ಸುಮ್ನೆ

ಅವನಿಗೆ ಶಾಲೆಗೆ ತಲುಪುವ ಹೊತ್ತಿಗೆ ತುಂಬಾ ಹಸಿವಾಗುತ್ತಿತ್ತು. ಹೀಗಾಗಿ ಅವನಿಗೆ 'ಜನಗಣಮನ' ಹೇಳುವುದೇ ಕಷ್ಟವಾಗಿ ಆ ಜನಗಣಮನ ಗಂಟಲಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತಿತ್ತು. ಅವನ ಪಕ್ಕದಲ್ಲಿ ನಿಂತಿದ್ದ ಹುಡುಗ ದೂರದಿಂದ ಬರುವ ಹುಡುಗರಿಗೆ ಕೇಳುವಂತೆ ಕೂಗುತ್ತಿದ್ದ. ಆತ ಪಟೇಲರ ಮಗ. ಅವನಿಗೆ ಪ್ರಕಾಶ ಎಂಬ ಒಳ್ಳೆಯ ಹೆಸರಿತ್ತು. ಅಲ್ಲದೇ ರಾಜ ಎಂಬ ಇನ್ನೊಂದು ಹೆಸರಿನಿಂದ ಮನೆಯವರು, ಅನೇಕರು ಕರೆಯುತ್ತಿದ್ದರು. ಈ ಬಡಪಾಯಿಗೆ ಸಹ ಒಂದು ಹೆಸರಿತ್ತು. ಆದರೆ ಆ ಹೆಸರಿನಿಂದ ಯಾರೂ ಕರೆಯುತ್ತಿರಲಿಲ್ಲ. 'ಸುಮ್ ಸುಮ್ನೆ' ಯಾನೆ ಪಿಳ್ಳೆ ಎಂದು ಕರೆಯುತ್ತಿದ್ದರು. ಯಾವ ಹೆಸರಾದರೂ ಒಂದೇ. ಹಸಿವಿಗೆ ಹೆಸರೇಕೆ?

'ಗೋವು ಕರುವನ್ನು ಬಿಟ್ಟು ಬಂದು ಸಾವಕಾಶವ ಮಾಡದಂತೆ.....' ಎಂಬ ಪದ್ಯ ಹೇಳುವಾಗ ಪಿಳ್ಳೆಗೆ ತಾನೇ ಆ ಕರು ಅನ್ನಿಸಿ ಇನ್ನೂ ಹಸಿವು. ಆ ಹುಲಿಯನ್ನ ಕೋವಿಯಿಂದ ತಾನು ಸಾಯಿಸಿದಂತೆ ಅನ್ನಿಸಿತು. ಅದು ಸತ್ತ ಮೇಲೆ ಅದರ ಪಟ್ಟೆಗಳು, ಕಿಸಿದಬಾಯಿ, ಯಾವಾಗಲೋ ಗುಟರು ಹಾಕಿದ ಸದ್ದುಗಳೆಲ್ಲ ನೆನಪಾಗಿ ನಾಲ್ಕನೇ ಪದ ಮರೆಯುತ್ತಿತ್ತು. ಏ ಪಿಳ್ಳೆ ನೀ ಹೇಳೊ... ಎಂದು ಮಾಸ್ತರು ಚುಳಕೆಯನ್ನು ಝುಳಪಿಸುತ್ತಿರುವಾಗ ಇನ್ನೇನು ಅದು ತನ್ನ ಮೇಲೆ ಎರಗುತ್ತದೆ ಎನ್ನಿಸಿ ಗಂಟಲ ಉಸಿರು ಆರಿ, ನಾಲಿಗೆಯ ದ್ರವ ಆರಿ, ಹಸಿವು ಎದ್ದು ಬಂದು ಆ ಚುಳಕೆಯನ್ನ ಎದುರಿಸಲು ನಿಂತಂತಾಗಿ ಅದನ್ನೇ ನೋಡುತ್ತಿದ್ದ. ಆ ಚುಳಕೆ ಪಿಳ್ಳೆಯ ಕೈಮೇಲೆ, ಕಾಲುಗಳ ಮೇಲೆ, ಬೆನ್ನಮೇಲೆ ಎಲ್ಲೆಂದರಲ್ಲೇ ಹರಿದಾಡಿ ಅಲ್ಲೆಲ್ಲಾ ಬಾಸುಂಡೆಗಳು. ನಿನ್ನೆಯ ಬಾಸುಂಡೆಯ ಮೇಲೆ ಇವತ್ತಿನ ಹೊಸ ಬಾಸುಂಡೆ... ಅದು ಹಸಿವನ್ನ ನಾಗರ ಹಾವಿನಂತೆ ಕಚ್ಚಿ ಉರಿ ಏರುವಂತೆ ಮಾಡುತ್ತಿತ್ತು. ನೋವಿಗೊಂದು ಹೊಸ ನೋವು ಜೊತೆಯಾಗುತ್ತಿತ್ತು.

ಹಸಿವು ಜೋರಾಗಿದಾಗ ಪಿಳ್ಳೆ ಬಾಯನ್ನು ಸುಮ್ ಸುಮ್ಮನೆ ಅಲ್ಲಾಡಿಸುತ್ತಿದ್ದ. ಈ ಅಲ್ಲಾಡುವಿಕೆ ಆಗಾಗ ಜೋರಾಗುತ್ತಿತ್ತು. ಅಲ್ಲದೆ ಶಾಲೆಯ ಎದುರಿನ ಗೇರು ಮರದ ಹಣ್ಣುಗಳೆಲ್ಲಾ ತನಗೆ ಸಿಕ್ಕರೆ ಎಂದು ಆಸೆ ಪಡುತ್ತ ಅದನ್ನು ಕಿತ್ತು ತಿಂದಹಾಗೆ, ಬಾಯಲ್ಲಿ ರಸ ತುಂಬಿದ ಹಾಗೆ, ಕಟವಾಯಲ್ಲಿ ಜೊಲ್ಲು ಸೋರುವುದು. ಆ ಜೊಲ್ಲಿನ ಸೋರುವಿಕೆಯಿಂದ ಉಂಟಾದ ಕರೆಗಳು ಹಸಿವಿನ ಕೋರೆ ದಾಡೆಗಳಂತೆ ಕಾಣಿಸುತ್ತಿದ್ದವು. ಪಕ್ಕದ ಹುಡುಗ ಚಂದಿ, 'ಲೇ ಏನೋ ಅದು? ನಂಗೂ ಕೊಡು' ಎಂದು ಪಿಸುಗುಟ್ಟಿದರೆ ಪಿಳ್ಳೆ, 'ಏನಿಲ್ಲ ಮಾರಾಯ, ಮೈಸೂರ್ ಪಾಕ್ ತಿಂತಿದ್ದೆ, ಜಿಲೇಬಿ ತಿಂತಿದ್ದೆ, ಸುಮ್ ಸುಮ್ನೆ' ಎಂದು ಒಂದೊಂದು ಸಲ ಒಂದೊಂದು ತಿಂಡಿ ಹೆಸರು ಹೇಳುತ್ತಿದ್ದ.

2

ತೀರ ಪಾಪದವನಾದ ಪಿಳ್ಳೆಯನ್ನ ಎಲ್ಲರೂ ಗೋಳಾಡಿಸುತ್ತಿದ್ದರು. ಮುಖ್ಯವಾಗಿ ಗಿಲ್-ಬಿಲ್ ನಾಗು. ತಾನು ಫೇಲಾಗಿ ಫೇಲಾಗಿ ಅದೇ ಕ್ಲಾಸ್‌ನಲ್ಲಿ ಉಳಿದು ಎಲ್ಲರಿಗೂ ಅಣ್ಣನಂತಿದ್ದ. ಆಗಾಗ ಪಿಳ್ಳೆಯ ತಲೆಮೇಲೆ ಮಟಕುತ್ತಿದ್ದ. ಪಿಳ್ಳೆ, 'ಯಾಕೋ?' ಎಂದು ಅಳುಮುಖ ಮಾಡಿದರೆ ತಗೋ ಮತ್ತೊಂದು. ಹೀಗೆ ಇನ್ನೂ ಅನೇಕರು ಪಿಳ್ಳೆ ತಲೆಗೆ ಮಟಕುತ್ತಿದ್ದರು. ಕಿವಿ ಹಿಂಡುತ್ತಿದ್ದರು. ತಾನು ಹುಟ್ಟಲೇ ಬಾರದಾಗಿತ್ತು ಎಂದು ಬೆಳ್ಳಕ್ಕಿ ಬಳಿ ಹೇಳಿಕೊಂಡು ಪಿಳ್ಳೆ ಅತ್ತುಬಿಟ್ಟ.

ಒಂದು ದಿನ ಶಾಲೆಗೆ ಇನ್‌ಸ್ಪೆಕ್ಟರ್ ಬರುತ್ತಾರೆಂದು ಮಾಸ್ತರು ಹೇಳಿದರು. ಆ ದಿನ ಎಲ್ಲರೂ ಪಾಠ ಓದಿಕೊಂಡು, ಮಗ್ಗಿ ಕಲಿತುಕೊಂಡು, ಒಳ್ಳೆಯ